# 4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,

# ತುಮಕೂರು-ಮಧುಗಿರಿ

**ಎಸ್.ಸಿ.ಸಂಖ್ಯೆ:5041/2022** ಪ್ರಾ.ಸಾ-3

ಚಾಸಾ-2

ದಿನಾಂಕ:26-07-2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

| | |
|---|---|
| ಹೆಸರು | ಬಾಬು |
| ತಂದೆಯ ಹೆಸರು | ನರಸಿಂಹಮೂರ್ತಿ |
| ವಯಸ್ಸು | 27 |
| ಉದ್ಯೋಗ | ಟೈಲ್ಸ್ ಕೆಲಸ |
| ವಾಸಸ್ಥಳ | ಡಿ ಪಾಳ್ಯ, ಗೌರಿಬಿದನೂರು |

**ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದ :-**

ಸುಮಾರು 1 ವರ್ಷದ ಹಿಂದೆ ತಿಂಗಳೂರಿನ ಡೈರಿಯ ಮುಂಭಾಗದಲ್ಲಿ ಜಗಳಿ ಕಟ್ಟೆಯ ಮೇಲೆ ನಾನು, ಚಾಸಾ-1, ಚಾಸಾ-3 ಮತ್ತು ಚಾಸಾ-5 ಮತ್ತು ಇತರರು ಜಾತ್ರೆಯ ಬಗ್ಗೆ ಮಾತನಾಡುತ್ತಿದ್ದೆವು. ಆಗ ಜಾಕಿ ಗಾಡಿಯ ಚಾಲಕ ಅಪಘಾತ ಆಗಿದ ಎಂದು ಹೇಳಿದ, ಆಗ ನಾವು ಎಲ್ಲರೂ ಆ ಜಾಗ ತಿಂಗಳೂರು ಚನ್ನಂದೂರು ರಸ್ತೆಯ ನಡುವೆ ಹೋದೆವು, ಅಲ್ಲಿ ಒಂದು ಗಂಡಸಿನ ಶವ ಇತ್ತು. ಶವದ ತಲೆಯ ಹಿಂಭಾಗದಲ್ಲಿ ಏಟಾಗಿತ್ತು. ಪಕ್ಕದಲ್ಲೆ ಒಂದು ದ್ವಿಚಕ್ರ ವಾಹನ ಬಿದ್ದಿತ್ತು. ಆ ದ್ವಿಚಕ್ರ ವಾಹನದ ಇಂಡಿಕೇಟರ್ ಒಡೆದೋಗಿತ್ತು, ಹಿಂಭಾಗ ಜಖಂ ಆಗಿತ್ತು. ಅಲ್ಲಿಂದ ನಾನು ವಾಪಸ್ಸು ಬಂದೆ. ರಸ್ತೆಯಲ್ಲಿ ಬಿದ್ದಿದ್ದವನಿಗೆ ಏನಾಯಿತು ಎಂದು ನನಗೆ ಗೊತ್ತಿಲ್ಲ. ಉಳಿದ ವಿಚಾರ ನನಗೆ ಗೊತ್ತಿಲ್ಲ.

**(ಈ ಹಂತದಲ್ಲಿ ಮಾನ್ಯ ಪಿಪಿ ಯವರು ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿದ್ದರಿಂದ ಅನುಮತಿಸಲಾಯಿತು)**

**ಪಾಟೀಸವಾಲು ಮಾನ್ಯ ಸರ್ಕಾರಿ ಅಭಿಯೋಜಕರಿಂದ :-**

ಅಲ್ಲಿ ಬಿದ್ದಿದ್ದ ವ್ಯಕ್ತಿಯನ್ನು ನಾನೇ ಒಂದು ವಾಹನದಲ್ಲಿ ಮಧುಗಿರಿ ಸರ್ಕಾರಿ ಆಸ್ಪತ್ರೆಗೆ ಸಾಗಿಸಿದೆ ದಾರಿ ಮಧ್ಯೆ ಎ.ಎಸ್.ಐ ಸಾಕ್ಷಪ್ಪ ರವರು ಸಿಕ್ಕಿ ಅವರು ಆತನನ್ನು ಆಸ್ಪತ್ರೆಗೆ ಕರೆದುಕೊಂಡು ಹೋದರು, ಆತ ಮೃತಪಟ್ಟಿದ್ದಾನೆ ಎಂದು ಆಸ್ಪತ್ರೆಯಲ್ಲಿ ಗೊತ್ತಾಯಿತು ಎಂದರೆ ಸರಿಯಲ್ಲ.

ಬಳಿಕ ನನಗೆ ತಿಳಿದ ವಿಚಾರ ಏನೆಂದರೆ ಆರೋಪಿಗಳು ಮತ್ತು ಮೃತ ಸುದೀಪ ಸ್ನೇಹಿತರಾಗಿದ್ದರು ಅವರು ಮೊಲ ಭೇಟಿ ಆಡಲು ಹೋಗುತ್ತಿದ್ದರು ಆ ರೀತಿ ಭೇಟಿ ಆಡುವಾಗ ಜಗಳವಾಗಿ 1 ನೇ ಆರೋಪಿ ಚಲಪತಿ ನಾಡಬಂದೂಕಿನಿಂದ ಸುದೀಪನಿಗೆ ಹೊಡೆದು ಸಾಯಿಸಿದ್ದಾನೆ, ಆ ಕೃತ್ಯ ವನ್ನು ಮರೆ ಮಾಚಲು 1 ನೇ ಆರೋಪಿ ಮತ್ತು ಉಳಿದ ಇಬ್ಬರು ಆರೋಪಿಗಳು ಹೆಣವನ್ನು ರಸ್ತೆಯ ಮಧ್ಯ ತಂದು ಹಾಕಿ ಮೃತನ ದ್ವಿಚಕ್ರ ವಾಹನದ ಹೆಡ್ ಲೈಟ್ ಮತ್ತು ಇಂಡಿಕೇಟರ್ ಅನ್ನು ಜಖ್ಮ ಗೊಳಿಸಿ ರಸ್ತೆ ಅಪಘಾತದಲ್ಲಿ ತೀರಿಕೊಂಡ ಎಂದು ಬಿಂಬಿಸಲು ಪ್ರಯತ್ನಿಸಿ ಸಾಕ್ಷ್ಯ ನಾಶ ಮಾಡಿದ್ದಾರೆ ಎಂದು ಕೂಡ ಗೊತ್ತಾಯಿತು ಎಂದರೆ ಸರಿಯಲ್ಲ. ಈ ಬಗ್ಗೆ ನಾನು ದಿನಾಂಕ:30-05-2022 ರಂದು ಹೇಳಿಕೆಯನ್ನು ಮತ್ತು ದಿನಾಂಕ:20-06-2022 ರಂದು ಪೊಲೀಸರ ಮುಂದೆ ಮರು ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ದಿನಾಂಕ:30-05-2022 ರ ಹೇಳಿಕೆ ಮತ್ತು ದಿನಾಂಕ:20-06-2022 ರ ಮರು ಹೇಳಿಕೆಯನ್ನು ನಿರಾಕರಿಸಿದ ಕಾರಣ ಅದನ್ನು ನಿಪಿ-10 ಮತ್ತು ನಿಪಿ-11 ಎಂದು ಗುರುತಿಸಲಾಯಿತು. ನನಗೆ ಎಲ್ಲಾ ವಿಚಾರ ಗೊತ್ತಿದ್ದರೂ ಚಲಪತಿ ಮತ್ತು ಅವನ ಸ್ನೇಹಿತರಿಸಿ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀಸವಾಲು ಶ್ರೀ.PCKR ವಕೀಲರಿಂದ ಆರೋಪಿ ಪರವಾಗಿ:-</u>**

ಪಾಟೀಸವಾಲು ಇಲ್ಲ ಎಂದು ನುಡಿಯುತ್ತಾರೆ.

**ಮರುವಿಚಾರಣೆ ಇಲ್ಲ.**

(ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಓ ತಿ ಹೇ ಸ ಇದೆ.**

**4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ತುಮಕೂರು-ಮಧುಗಿರಿ.**